# ಕರ್ನಾಟಕ ಉಚ್ಚ ನ್ಯಾಯಾಲಯ

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆರ್. ದೇವದಾಸ್

## ಎಲ್. ಕಾರ್ತಿಕ್ ಮತ್ತು ಇತರರು -ವಿರುದ್ಧ ಕರ್ನಾಟಕ ಪವರ್ ಟ್ರಾನ್ಸ್ಮಿಷನ್ ಕಾರ್ಪೊರೇಷನ್ ಅಮಿಟೆಡ್, ಬೆಂಗಳೂರು ಮತ್ತು ಇತರರು*

## ಆಜ್ಞೆ

ನ್ಯಾಯಮೂರ್ತಿ ಶ್ರೀ ಆರ್. ದೇವದಾಸ್:

ಈ ರಿಟ್ ಅರ್ಜಿಗಳಲ್ಲಿನ ದಾವೆಯೆಂದರೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಇದರ ನೌಕರರ ಎರಡು ಪ್ರವರ್ಗಗಳಾದ ನೇರವಾಗಿ ನೇಮಕಾತಿ ಪಡೆದ ಸಹಾಯಕ ಇಂಜಿನಿಯರ್ಗಳು ಮತ್ತು ಪದವೀದರರಲ್ಲದ/ಡಿಪ್ಲೊಮಾ ಪಡೆದು ಪ್ರಾರಂಭದಲ್ಲಿ ಕಿರಿಯ ಇಂಜಿನಿಯರ್ಗಳಾಗಿ ನೇಮಕಾತಿ ಪಡೆದು, ತರುವಾಯದಲ್ಲಿ ಬಿ.ಇ. ಅಥವಾ ಎ.ಐ.ಎಂ.ಇ. (ಇಂಡಿಯ) ವಿದ್ಯಾರ್ಹತೆಗಳನ್ನು ಪಡೆದು, ಸಹಾಯಕ ಇಂಜಿನಿಯರ್ಗಳಾಗಿ ' ವರ್ಗಾವಣೆ ಮೂಲಕ ನೇಮಕಾತಿ ಪಡೆದ ' ಪಕ್ಷಕಾರರ ನಡುವೆ ಮುಂಬಡ್ತಿಗಾಗಿ ಪರಸ್ಪರರ ವಿರುದ್ಧ ಕ್ಲೇಮುಗಳನ್ನು ಸಲ್ಲಿಸಲಾಗಿದೆ.

2. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೇಮಕಾತಿ ಮತ್ತು ಮಂಡಳಿಯ ನೌಕರರ ಮುಂಬಡ್ತಿ ಸೇವಾ ವಿನಿಯಮಗಳು, 1969 ನ್ನು (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ ' ಕೆಇಬಿ ಆರ್ಪಿ ವಿನಿಯಮಗಳು ಎಂದು ಉಲ್ಲೇಖಿಸಲಾಗುವುದು) ಸಹಾಯಕ ಇಂಜಿನಿಯರ್ಗಳ ಹುದ್ದೆಗೆ ನೇಮಕಾತಿಗಾಗಿ ಉಪಬಂಧ ಕಲ್ಪಿಸಲುದಿನಾಂಕ: 26.07.1986 ರಂದು ತಿದ್ದುಪಡಿ ಮಾಡಲಾಗಿದ್ದು, ಅಂದಿನಿಂದ ನೇರ ನೇಮಕಾತಿಗೆ ಮತ್ತು ಇಲಾಖಾ ಮುಂಬಡ್ತಿಯ ಮೂಲಕ ಉಪಬಂಧ ಕಲ್ಪಿಸಲಾಗಿದೆ.ತಿದ್ದುಪಡಿ ಮೂಲಕ, ಸಹಾಯಕ ಇಂಜಿನಿಯರ್ ಆಗಿ ವರ್ಗಾವಣೆ ಮೂಲಕ ನೇಮಕಗೊಳ್ಳಬೇಕಾದ, ತರುವಾಯದಲ್ಲಿ ಬಿ.ಇ. ಅಥವಾ ಎ.ಐ.ಎಂ.ಇ. ಶಿಕ್ಷಣಾರ್ಹತೆಯನ್ನು ಪಡೆದ ಕಿರಿಯ ಇಂಜಿನಿಯರ್ ಹುದ್ದೆಗಾಗಿ ಉಪಬಂಧ ಕಲ್ಪಿಸಲಾಗಿತ್ತು.ಅಂಥ ವರ್ಗಾವಣೆಗೆ ಅರ್ಹರಾಗಿರುವವರ ಪೈಕಿ ಆಂತರಿಕ (ಇಂಟರ್ ಸೆ) ಜೇಷ್ಠತೆಯನ್ನು ಉಪೇಕ್ಷಿಸದೆ ಖಾಲಿ ಹುದ್ದೆಯ ಲಭ್ಯತೆಗೆ ಒಳಪಟ್ಟು, ಪದವಿ ಪಡೆದ ದಿನಾಂಕದಿಂದ ಈ ವರ್ಗಾವಣೆಯು ಜಾರಿಯಾಗಬೇಕಿತ್ತು.ವಿನಿಯಮಗಳ v ನೇ ಅಧ್ಯಾಯದ 10 ಎ ಕ್ರಮ ಸಂಖ್ಯೆಗೆ ಅನುಬಂಧಿಸಿದ ಟಿಪ್ಪಣಿ ( v) ರಲ್ಲಿ,ದಿನಾಂಕ: 01.07.1976 ರಂದು ಅಥವಾ ನಂತರ ಸಹಾಯಕ ಇಂಜಿನಿಯರ್ ಆಗಿ ವರ್ಗಾವಣೆ ಮೂಲಕ ನೇಮಕಾತಿ ಪಡೆದಿರುವ ಕಿರಿಯ ಇಂಜಿನಿಯರ್ನನ್ನು, ಅದರಲ್ಲಿ ಹೇಳಿರುವ ಎರಡು ಷರತ್ತುಗಳೊಂದಿಗೆ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಗೆ ಮುಂಬಡ್ತಿಗಾಗಿ ಪರಿಗಣಿಸುವ ಉದ್ದೇಶಕ್ಕಾಗಿ, ಸಹಾಯಕ ಇಂಜಿನಿಯರ್ ಹುದ್ದೆಯಲ್ಲಿ ಆತನು ಇದ್ದನು ಎಂಬಂತೆ, ಗರಿಷ್ಠ 4 ವರ್ಷಗಳಿಗೆ ಒಳಪಟ್ಟು, ಸಹಾಯಕ ಇಂಜಿನಿಯರ್ ಆಗಿ ನೇಮಕಗೊಳ್ಳುವುದಕ್ಕೆ ಮುಂಚೆ ಕಿರಿಯ ಇಂಜಿನಿಯರ್ ಆಗಿ ಆತನು ಸಲ್ಲಿಸಿದ ಮೂರನೇ ಒಂದರಷ್ಟು ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಕ್ಕೆ ಅರ್ಹನಾಗಿರತಕ್ಕದ್ದು ಎಂದು ಉಪಬಂಧಿಸಲಾಗಿದೆ.

3. ತಿದ್ದುಪಡಿ ಉಪಬಂಧವು, ಈಗಿರುವ ಸಹಾಯಕ ಇಂಜಿನಿಯರ್ಗಳ ಜೊತೆಗೆ ಪೂರ್ವಾನ್ವಯ ಜೇಷ್ಠತೆಗೆ ಉಪಬಂಧ ಕಲ್ಪಿಸಿರುವುದರಿಂದ, ಅದನ್ನು ರಿಟ್ ಅರ್ಜಿಸಂಖ್ಯೆ: 14622/1986 ರಲ್ಲಿ ಎಂ.ವಿ. ಗುರುಶ್ರೀಪಾದ ವಿರುದ್ಧ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್ ಮತ್ತು ಇತರರು ಮೊಕದ್ದಮೆ ಮೂಲಕ ಈ ನ್ಯಾಯಾಲಯದ

ಮುಂದೆ ಪ್ರಶ್ನಿಸಲಾಗಿತ್ತು.ಈ ನಡುವೆ, ಇಂತಹುವೇ ಉಪಬಂಧಗಳು, ಕೆ. ನಾರಾಯಣನ್ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು 1994 ಎಸ್ಯುಪಿಪಿ ( 1) ಎಸ್ಸಿಸಿ 44 692 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಪರಿಗಣನೆಗಾಗಿ ಬಂದಿದ್ದವು.ದಿನಾಂಕ: 01.01.1976 ರಿಂದ ಪೂರ್ವಾನ್ವಯವಾಗಿ ಜಾರಿ ಮಾಡುವುದನ್ನು ಅನೂರ್ಜಿತಗೊಳಿಸುವಾಗ, ಅರ್ಹತೆಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆಯೆಂದು ಟಿಪ್ಪಣಿ(ii) ನ್ನು ಓದಬೇಕೆಂಬುದಾಗಿ ನಿರ್ದೇಶಿಸಲಾಗಿತ್ತು.ತತ್ಪರಿಣಾಮವಾಗಿ, ಈ ನ್ಯಾಯಾಲಯವು, ವೇಸ್ಟೇಜ್ಗೆ ಸಂಬಂಧಿಸಿದ ಟಿಪ್ಪಣಿ(ii) ನ್ನು ಅರ್ಹತೆಯನ್ನು ಉಪಬಂಧಿಸುವುದಕ್ಕೆ ಮಾತ್ರವೇ ಓದತಕ್ಕದ್ದು ಎಂದು ನಿರ್ದೇಶಿಸಿ, ಗುರುಶ್ರೀಪಾದ ಮೊಕದ್ದಮೆಯನ್ನು ವಿಲೇ ಮಾಡಿತ್ತು ಮತ್ತು ಆದೇಶದ ಹಿನ್ನೆಲೆಯಲ್ಲಿ ಮತ್ತು ಕೆ. ನಾರಾಯಣನ್ ಮೊಕದ್ದಮೆಯಲ್ಲಿನ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಹೊಸ ಶ್ರೇಣಿ ಪಟ್ಟಿಯನ್ನು (ಗ್ರೇಡೇಷನ್) ಸಿದ್ಧಪಡಿಸಲು ಪ್ರತ್ಯರ್ಜಿದಾರ ಮಂಡಳಿಗೆ ನಿರ್ದೇಶಿಸಿತ್ತು.

4. ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ದೇಶನಗಳ ಮತ್ತು ಚ ಅಭಿಪ್ರಾಯಗಳ ಅನುಪಾಲನೆಯಲ್ಲಿ, ಮಂಡಳಿಯು ಎರಡು ಸಂದರ್ಭಗಳಲ್ಲಿ ಎಂದರೆ,ದಿನಾಂಕ: 16.08.1996 ರಂದು ಮತ್ತುದಿನಾಂಕ: 27.12.1996 ರಂದು ವಿನಿಯಮಗಳ ತಿದ್ದುಪಡಿ ಮಾಡಿತ್ತು.ದಿನಾಂಕ: 16.08.1996 ರ ತಿದ್ದುಪಡಿ ಮೂಲಕ,ದಿನಾಂಕ: 26.07.1986 ರಂದು ಅಥವಾ ನಂತರ ಸಹಾಯಕ ಇಂಜಿನಿಯರ್ (ಎಲೆಕ್ಟ್ರಿಕಲ್) ಆಗಿ ವರ್ಗಾವಣೆ ಮೂಲಕ ನೇಮಕಗೊಂಡಿರುವ ಕಿರಿಯ ಇಂಜಿನಿಯರ್ನು (ಎಲೆಕ್ಟ್ರಿಕಲ್), ಸಹಾಯಕ ಕಾರನಿರ್ವಾಹಕ ಇಂಜಿನಿಯರ್ (ಎಲೆಕ್ಟ್ರಿಕಲ್) ಹುದ್ದೆಗೆ ಪದೋನ್ನತಿಗಾಗಿ ತನ್ನ ಅರ್ಹತೆಯನ್ನು ಪರಿಗಣಿಸುವ ಉದ್ದೇಶಕ್ಕಾಗಿ, ಗರಿಷ್ಠ 4 ವರ್ಷಗಳಿಗೆ ಒಳಪಟ್ಟು, ಸಹಾಯಕ ಇಂಜಿನಿಯರ್ (ಎಲೆಕ್ಟ್ರಿಕಲ್) ಆಗಿ ನೇಮಕಗೊಳ್ಳುವ ಮೊದಲು, ಕಿರಿಯ ಇಂಜಿನಿಯರ್ (ಎಲೆಕ್ಟ್ರಿಕಲ್) ಆಗಿ ಆತನು ಸಲ್ಲಿಸಿದ ಮೂರನೇ ಒಂದರಷ್ಟು ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಲು ಅರ್ಹನಾಗಿರತಕ್ಕದ್ದು ಎಂದು ಉಪಬಂಧಿಸಲಾಗಿತ್ತು.ಸಹಾಯಕ ಇಂಜಿನಿಯರ್ (ಎಲೆಕ್ಟ್ರಿಕಲ್) ಆಗಿ ನೇಮಕಗೊಂಡ ಕಿರಿಯ ಇಂಜಿನಿಯರ್ನ (ಎಲೆಕ್ಟ್ರಕಲ್) ಜೇಷ್ಠತೆಯನ್ನು, ವರ್ಗಾವಣೆ ದಿನಾಂಕದಿಂದ ಸಹಾಯಕ ಇಂಜಿನಿಯರ್ (ಎಲೆಕ್ಟಿಕಲ್) ಪ್ರವರ್ಗದಲ್ಲಿ ನಿಗದಿಪಡಿಸತಕ್ಕದ್ದು ಎಂದು ಉಪಬಂಧಿಸಲಾಗಿತ್ತು.ಇದಲ್ಲದೆ, ಸಹಾಯಕ ಇಂಜಿನಿಯರ್ (ಎಲೆಕಲ್) ಆಗಿ ನೇಮಕಗೊಂಡ ಕಿರಿಯ ಇಂಜಿನಿಯರ್ನನ್ನು (ಎಲೆಕ್ಟ್ರಿಕಲ್), ಅಂಥ ನೇಮಕಾತಿಯ ನಂತರ ಸಹಾಯಕ ಇಂಜಿನಿಯರ್ (ಎಲೆಕ್ಟಿಕಲ್) ಆಗಿ ಕರ್ತವ್ಯದ ಮೇಲೆ ಕನಿಷ್ಠ ಎರಡು ವರ್ಷಗಳ ಸೇವೆಯಲ್ಲಿ ನೇಮಿಸಿರತಕ್ಕದ್ದು ಮತ್ತು ಸಹಾಯಕ ಕಾರನಿರ್ವಾಹಕ ಇಂಜಿನಿಯರ್ (ಎಲೆಕ್ಟ್ರಿಕಲ್) ವೃಂದಕ್ಕೆ ಪದೋನ್ನತಿಗಾಗಿ ಅರ್ಹನಾಗಲು ಮೇಲೆ ಹೇಳಿದಂತೆ ವೇಸ್ಟೇಜ್ ಆಗಿ ನೀಡಿದ ಸೇವೆಯನ್ನು ಒಳಗೊಂಡು ಐದು ವರ್ಷಗಳ ಒಟ್ಟು ಕನಿಷ್ಠ ಸೇವೆಯನ್ನು ಸಲ್ಲಿಸಿರತಕ್ಕದ್ದು ಎಂದು ಉಪಬಂಧಿಸಲಾಗಿದೆ.

5.ದಿನಾಂಕ: 27.12.1996 ರ ಮಂಡಳಿ ಆದೇಶದಲ್ಲಿ, ವರ್ಗಾವಣೆ ಮೂಲಕ ನೇಮಕಾತಿಯ ಅರ್ಹತೆಯಾಗಿ ಕನಿಷ್ಠ ಸೇವಾವಧಿಯನ್ನು, ಕಿರಿಯ ಇಂಜಿನಿಯರ್ ಆಗಿ 7 ವರ್ಷಗಳ ಸೇವೆಗೆ ಹೆಚ್ಚಿಸಲಾಗಿತ್ತು.

6. ಅತ್ಯಂತ ಮುಖ್ಯವಾಗಿ,ದಿನಾಂಕ: 03.06.2015 ರ ಮಂಡಳಿ ಆದೇಶದ ಮೂಲಕ, ಸೇವೆಯಲ್ಲಿರುವ ನೌಕರರನ್ನು ವರ್ಗಾವಣೆ ಮೂಲಕ ನೇಮಕಾತಿ ಮಾಡುವ ಯೋಜನೆಯನ್ನು ಹಿಂಪಡೆಯಲಾಗಿತ್ತು.ಮಂಡಳಿಯು, ನೌಕರರನ್ನು ವರ್ಗಾವಣೆ ಮೂಲಕ ನೇಮಕಾತಿ ಮಾಡುವುದಕ್ಕೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಹೊರಡಿಸಿದ ಎಲ್ಲಾ ಆದೇಶಗಳನ್ನು, ಕೂಡಲೇ ಜಾರಿಗೆ ಬರುವಂತೆ

ಹಿಂಪಡೆಯಲು ತನ್ನ ಅನುಮೋದನೆಯನ್ನು ನೀಡಿತ್ತು.ವರ್ಗಾವಣೆ ಮೂಲಕ ನೇಮಕಾತಿ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ಕೆಇಬಿ ಆರ್ & ಪಿ ವಿನಿಯಮಗಳಿಗೆ ಮಾಡಿದ ಎಲ್ಲಾ ತಿದ್ದುಪಡಿಗಳನ್ನು ಹಿಂಪಡೆಯಲಾಗಿತ್ತು.ದಿನಾಂಕ: 03.06.2015 ಕ್ಕೆ ಮುಂಚೆ ಚಾಲ್ತಿಯಲ್ಲಿದ್ದ ನಿಯಮಗಳು ಮತ್ತು ವಿನಿಯಮಗಳಿಗನುಸಾರವಾಗಿ, ಕಿರಿಯ ಇಂಜಿನಿಯರ್ ವೃಂದದಿಂದ ಸಹಾಯಕ ಇಂಜಿನಿಯರ್ ವೃಂದಕ್ಕೆ ವರ್ಗಾವಣೆ ಮೂಲಕ ನೇಮಕಾತಿಯನ್ನು ಕೋರಿ,ದಿನಾಂಕ: 18.03.2015 ರಂದು ಇದ್ದ ನೌಕರರ ಕ್ಷೇಮುಗಳ ಸಂಬಂಧದಲ್ಲಿ ಇತ್ಯರ್ಥದಲ್ಲಿದ್ದಂಥ ಮನವಿಗಳನ್ನು ಕುರಿತು ಮಾತ್ರವೇ ಕ್ರಮ ಜರುಗಿಸುವುದಕ್ಕಾಗಿ ಸಹ ಅನುಮೋದನೆಯನ್ನು ನೀಡಲಾಗಿತ್ತು.

7. ರಿಟ್ ಅರ್ಜಿಸಂಖ್ಯೆ: 26986/2018 ರಲ್ಲಿನ ಅರ್ಜಿದಾರರು, ನೇರವಾಗಿ ನೇಮಕಗೊಂಡ ಸಹಾಯಕ ಇಂಜಿನಿಯರ್ಗಳಾಗಿರುವರು.ರಿಟ್ ಅರ್ಜಿಸಂಖ್ಯೆ: 14159/2018, 42670/2019 ಮತ್ತು 1670/2020 ಗಳಲ್ಲಿನ ಅರ್ಜಿದಾರರು, ಮೂಲತಃ ಕಿರಿಯ ಇಂಜಿನಿಯರ್ಗಳಾಗಿ ನೇಮಕಗೊಂಡು, ತರುವಾಯದಲ್ಲಿ ವರ್ಗಾವಣೆ ಮೂಲಕ ಸಹಾಯಕ ಇಂಜಿನಿಯರ್ಗಳಾಗಿ ನೇಮಕಗೊಂಡಿರುವ ಸಹಾಯಕ ಇಂಜಿನಿಯರ್ಗಳಾಗಿರುವರು.ಅನುಕೂಲತೆ ಮತ್ತು ಸಂಕ್ಷಿಪ್ತತೆಯ ಸಲುವಾಗಿ, ನೇರವಾಗಿ ನೇಮಕಗೊಂಡ ಇಂಜಿನಿಯರರನ್ನು 66 ಅರ್ಜಿದಾರರು " ಎಂದು ಮತ್ತು ವರ್ಗಾವಣೆ ಮೂಲಕ ನೇಮಕಗೊಂಡ ಇಂಜಿನಿಯರರನ್ನು ' ಪ್ರತ್ಯರ್ಜಿದಾರರು ' ಎಂದು ಉಲ್ಲೇಖಿಸಲಾಗುವುದು.

8. ಅರ್ಜಿದಾರರುದಿನಾಂಕ: 29.06.2010 ರಂದು ನೇಮಕಗೊಂಡಿದ್ದರು ಎಂಬ ಬಗ್ಗೆ ಯಾವುದೇ ವಿವಾದವಿಲ್ಲದಿರುವುದರಿಂದ, ಅವರನ್ನು ಅನುಬಂಧ ' ಬಿ'ಯಲ್ಲಿದಿನಾಂಕ: 27.10.2017 ರ ಜೇಷ್ಠತಾ ಪಟ್ಟಿಯಲ್ಲಿ ಮೇಲಿರಿಸಲಾಗಿದೆ.ದಿನಾಂಕ: 07.02.2011 ರಂದು ವರ್ಗಾವಣೆ ಮೂಲಕ ನೇಮಕಗೊಂಡಿದ್ದ ಪ್ರತ್ಯರ್ಜಿದಾರರನ್ನು ಜೇಷ್ಠತಾ ಪಟ್ಟಿಯಲ್ಲಿ ಅರ್ಜಿದಾರರ ಕೆಳಗಿರಿಸಲಾಗಿದೆ.ಪದೋನ್ನತಿಯನ್ನು ಪರಿಗಣಿಸುವುದಕ್ಕಾಗಿ ಮಾಹಿತಿಯನ್ನು ನೀಡಲುದಿನಾಂಕ: 22.03.2018 ರಂದು ಅರ್ಜಿದಾರರನ್ನು ಕೋರಿ ಅವರಿಗೆ ಪತ್ರವನ್ನು ಬರೆಯಲಾಗಿತ್ತು.ಆದಾಗ್ಯೂ, ಅರ್ಜಿದಾರರು ನೀಡಿದ ಮಾಹಿತಿಯನ್ನು ಮತ್ತಷ್ಟು ಪರಾಮರ್ಶಿಸದೆ,ದಿನಾಂಕ: 21.06.2018 ರ ತರುವಾಯದ ಪತ್ರವನ್ನು ಅಂಥ ಮಾಹಿತಿ ಕೋರಿ ಪ್ರತ್ಯರ್ಜಿದಾರರಿಗೆ ನೀಡಲಾಗಿತ್ತು ಎಂಬುದು ಅರ್ಜಿದಾರರ ವಾದವಾಗಿದೆ.ಈ ಹಂತದಲ್ಲಿ, ಪ್ರತ್ಯರ್ಜಿದಾರರಿಗೆ ನೀಡಿದದಿನಾಂಕ: 21.06.2018 ರ ಪತ್ರವನ್ನು ಪ್ರಶ್ನಿಸಿ ಅರ್ಜಿದಾರರು ರಿಟ್ ಅರ್ಜಿಸಂಖ್ಯೆ: 26986/2018 ನ್ನು ಸಲ್ಲಿಸಿದ್ದಾರೆ.ಮುಂಬಡ್ತಿಗಾಗಿ, ಅರ್ಜಿದಾರರಿಗೆ ನೀಡಿದ್ದದಿನಾಂಕ: 22.03.2018 ರ ಪತ್ರವನ್ನು ಅನುಸರಿಸಲು ಪ್ರತ್ಯರ್ಜಿದಾರ-ನಿಗಮಕ್ಕೆ ನಿರ್ದೇಶನವನ್ನು ಕೋರಿ ಮನವಿಯನ್ನು ಸಹ ಮಾಡಿಕೊಳ್ಳಲಾಗಿತ್ತು.ಅರ್ಜಿದಾರರ ವಾದವೆಂದರೆ, ಸಹಾಯಕ ಕಾರನಿರ್ವಾಹಕ ಇಂಜಿನಿಯರ್ಗಳ ಹುದ್ದೆಗೆ ಲಭ್ಯವಿದ್ದ ಖಾಲಿಸ್ಥಾನಗಳನ್ನಾಧರಿಸಿದ ಜೇಷ್ಠತಾ ಪಟ್ಟಿಯ ಅನುಸಾರ ಅರ್ಜಿದಾರರ ಅಭ್ಯರ್ಥಿತನವನ್ನು ಪರಿಗಣಿಸುವುದು ಅಗತ್ಯವಾಗಿತ್ತು.ಇನ್ನೊಂದೆಡೆ, ಪ್ರತ್ಯರ್ಜಿದಾರರ ವಾದವೆಂದರೆ, ಸಹಾಯಕ ಕಾರನಿರ್ವಾಹಕ ಇಂಜಿನಿಯರ್ ಹುದ್ದೆಗೆ ಮುಂಬಡ್ತಿಗೆ ಅರ್ಹವಾಗಿದ್ದ 8 ವರ್ಷಗಳ ಕನಿಷ್ಠ ಅನುಭವವನ್ನು ಅರ್ಜಿದಾರರು ಪಡೆದಿರಲಿಲ್ಲ ಮತ್ತು ಇನ್ನೊಂದೆಡೆ, ಕಿರಿಯ ಇಂಜಿನಿಯರ್ಗಳಾಗಿ ಪ್ರತ್ಯರ್ಜಿದಾರರು ಮೂರನೇ ಒಂದರಷ್ಟು ಸೇವೆ ಸಲ್ಲಿಸಿದ್ದರಿಂದ, ಅವರನ್ನು ಪರಿಗಣಿಸಬೇಕಿತ್ತು ಮತ್ತು ವೇಸ್ಟೇಜ್ ನೀಡುವುದು ಅಗತ್ಯವಾಗಿತ್ತು, ಪ್ರತ್ಯರ್ಜಿದಾರರು ಅಗತ್ಯ ಅರ್ಹತೆಯನ್ನು ಹೊಂದಿದ್ದರಾದ್ದರಿಂದ, ಮುಂಬಡ್ತಿಗಾಗಿ ಪ್ರತ್ಯರ್ಜಿದಾರರ ಪ್ರಕರಣವನ್ನು ಪರಿಗಣಿಸುವುದನ್ನು ಪ್ರತ್ಯರ್ಜಿದಾರ-ನಿಗಮವು ಸರಿಯಾಗಿಯೇ ನಿರ್ಧರಿಸಿದೆ.

9. ಅರ್ಜಿದಾರರು (ನೇರ ನೇಮಕಾತಿ ಹೊಂದಿದವರು) ರಿಟ್ ಅರ್ಜಿಸಂಖ್ಯೆ: 26986/2018 ನ್ನು ಸಲ್ಲಿಸಿದ ತರುವಾಯ, ಪ್ರತ್ಯರ್ಜಿದಾರರು (ವರ್ಗಾವಣೆ ಮೂಲಕ ನೇಮಕಗೊಂಡವರು),ದಿನಾಂಕ: 21.06.2018 ರ ಪತ್ರದ ರೂಪದಲ್ಲಿ ಮುಂಡ್ತಿಗಾಗಿ ತಮ್ಮ ಕ್ಲೇಮುಗಳನ್ನು ಪರಿಗಣಿಸಲು ನಿಗಮಕ್ಕೆ ನಿರ್ದೇಶನ ನೀಡುವಂತೆ ಕೋರಿ, ರಿಟ್ ಅರ್ಜಿಸಂಖ್ಯೆ: 14159/2018 ನ್ನು ಮತ್ತು 42670/2019 ನ್ನು ಸಲ್ಲಿಸಿದರು.ಆ ತರುವಾಯ, ಆರ್ & ಪಿ ವಿನಿಯಮಗಳಿಗೆದಿನಾಂಕ: 06.01.2020 ರ ಅಧಿಸೂಚನೆ ಮೂಲಕ, ಮುಕ್ತ ಸ್ಪರ್ಧೆಯಿಂದ ಮತ್ತು ಸೇವೆಯಲ್ಲಿರುವ ನೌಕರರರಿಂದ ಶೇಕಡ 25 ರಿಂದ ಶೇಕಡ 10 ಕ್ಕೆ ನೇರ ನೇಮಕಾತಿ ಮೂಲಕ ಸಹಾಯಕ ಕಾರನಿರ್ವಾಹಕ ಇಂಜಿನಿಯರ್ (ಎಲೆಕ್ಟ್ರಿಕಲ್) ವೃಂದದಲ್ಲಿ ಹುದ್ದೆಗಳ ಶೇಕಡಾವಾರನ್ನು ಇಳಿಸಿ ನಿಗಮವು ತಿದ್ದುಪಡಿ ಮಾಡಿತು.ತತ್ಪರಿಣಾಮವಾಗಿ, ಶೇಕಡ 45 ರಿಂದ ಶೇಕಡ 60 ರಷ್ಟು ಜೇಷ್ಠತೆ-ಮತ್ತು-ಮೆರಿಟ್ ಆಧಾರದ ಮೇಲೆ ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ಹೆಚ್ಚಿಸಿತು.

10. ಆದುದರಿಂದ, ತಿದ್ದುಪಡಿಯಾದ ವಿನಿಯಮಗಳ ಮೇರೆಗೆ ನಿಗದಿಪಡಿಸಿದ್ದ, ಆದರೆ ತರುವಾಯದಲ್ಲಿದಿನಾಂಕ: 03.06.2015 ರ ಆದೇಶದ ಮೂಲಕ ಹಿಂಪಡೆಯಲಾಗಿದ್ದ ವೇಸ್ಟೇಜ್‌ಅನ್ನು ಮುಂಬಡ್ತಿ ವಿಷಯದಲ್ಲಿ ಪ್ರತ್ಯರ್ಜಿದಾರರಿಗೆ ನೀಡುವುದು ಅಗತ್ಯವೇ ಎಂಬುದನ್ನು ನಿರ್ಧರಿಸುವುದು ವಿಷಯದ ನಿರ್ಣಾಯಕ ಅಂಶವಾಗಿದೆ.

11. ಶ್ರೀ ಪಿ. ಎಸ್. ರಾಜಗೋಪಾಲ, ಅರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು ನಿವೇದಿಸಿಕೊಂಡಿರುವುದೇನೆಂದರೆ, ಒಮ್ಮೆ ವರ್ಗಾವಣೆ ಮೂಲಕ ನೇಮಕಾತಿ ಯೋಜನೆಯನ್ನು ಮತ್ತು ಅದರಲ್ಲಿ ದೊರಕುವ ಎಲ್ಲಾ ಪ್ರಯೋಜನಗಳನ್ನುದಿನಾಂಕ: 03.06.2015 ರ ಅಧಿಸೂಚನೆ ಮೂಲಕ ಹಿಂಪಡೆದಿದ್ದಾಗ, ವರ್ಗಾವಣೆ ಮೂಲಕ ನೇಮಕಾತಿ ಯೋಜನೆಯ ಮೇರೆಗೆ ನಿಯಮಿಸಲಾಗಿದ್ದ ಸೇವಾ ವೇಸ್ಟೇಜ್‌ಅನ್ನು ಪರಿಗಣಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.ವರ್ಗಾವಣೆ ಮೂಲಕ ನೇಮಕಾತಿ ಯೋಜನೆಯನ್ನು ಹಿಂತೆಗೆದುಕೊಳ್ಳುವಾಗ, ಕಿರಿಯ ಇಂಜಿನಿಯರ್ ವೃಂದದಿಂದ ಸಹಾಯಕ ಇಂಜಿನಿಯರ್ ವೃಂದಕ್ಕೆ ವರ್ಗಾವಣೆ ಮೂಲಕ ನೇಮಕಾತಿ ಕೋರಿದಿನಾಂಕ: 18.03.2015 ರಂದು ಇದ್ದಂತೆ ನೌಕರರ ಕ್ಲೇಮುಗಳ ಇತ್ಯರ್ಥದಲ್ಲಿರುವಂಥ ಮನವಿಗಳನ್ನು ಮಾತ್ರ ವ್ಯವಹರಿಸುವುದಕ್ಕಾಗಿ ಅನುಮೋದನೆ ನೀಡುವುದನ್ನು ಹೊರತುಪಡಿಸಿ, ವರ್ಗಾವಣೆ ಮೂಲಕ ನೌಕರರ ನೇಮಕಾತಿಗೆ ಸಂಬಂಧಿಸಿದ ಕಾಲ ಕಾಲಕ್ಕೆ ಹೊರಡಿಸಲಾಗಿದ್ದ ಎಲ್ಲಾ ಆದೇಶಗಳನ್ನು ನಿರ್ದಿಷ್ಟವಾಗಿ ಹಿಂಪಡೆಯಲಾಗಿತ್ತು.ಇಡೀ ಯೋಜನೆಯನ್ನೇ ಹಿಂಪಡೆದಿದ್ದಾಗ, ಹಿಂದಿನ ಯೋಜನೆಯನ್ನು ಮುಂದುವರಿಸುವುದಕ್ಕಾಗಿ ಉಪಬಂಧ ಕಲ್ಪಿಸಿದ್ದ ಸೇವಾ ವೇಸ್ಟೇಜ್ ಇದು ಪ್ರತ್ಯರ್ಜಿದಾರರಿಗೆ ಪ್ರಯೋಜನವನ್ನು ಸುನಿಶ್ಚಿತಗೊಳಿಸುವುದನ್ನು ಮುಂದುವರಿಸುತ್ತದೆ ಎಂಬುದಾಗಿ ಪ್ರತ್ಯರ್ಜಿದಾರರು ವಾದಿಸಲಾಗುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.

12. ಮಾನ್ಯ ಹಿರಿಯ ನ್ಯಾಯವಾದಿಗಳು, ಬಿ. ವಿ. ಶಿವಯ್ಯ ಮತ್ತು ಇತರರು-ವಿರುದ್ಧ-ಕೆ.ಅದ್ದಂಕಿ ಬಾಬು ಮತ್ತು ಇತರರು (1998) 6 ಎಸ್ಸಿಸಿ 720 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನವಲಂಬಿಸಿ, ಮುಂಬಡ್ತಿಯ ಉದ್ದೇಶಕ್ಕಾಗಿ ಚ ಜೇಷ್ಠತೆ-ಮತ್ತು-ಮೆರಿಟ್ ತತ್ವವನ್ನು ಅನ್ವಯಿಸುವಾಗ, ಅರ್ಹ ನೌಕರರ ಆಂತರಿಕ ಜೇಷ್ಠತೆಯನ್ನು ಪರಿಗಣಿಸಬೇಕಾದ ಅಗತ್ಯವಿದೆ.ಜೇಷ್ಠತೆಯ ಅಂಥ ನಿರ್ಧರಣೆಯು ಕೆಲವು ಹಕ್ಕುಗಳನ್ನು ಪ್ರದಾನ ಮಾಡುತ್ತದೆ ಮತ್ತು ಜೇಷ್ಠತೆ-ಮತ್ತು-ಮೆರಿಟ್ ತತ್ವವು ಜೇಷ್ಠತೆಯಿಂದ ದೊರಕುವ ಅಂಥ ಹಕ್ಕುಗಳಿಗೆ ಪರಿಣಾಮ ನೀಡುತ್ತದೆ.

13. ಭಾರತ ಒಕ್ಕೂಟ ಮತ್ತು ಇತರರು -ವಿರುದ್ಧ-ಲೆಫ್ಟಿನೆಂಟ್ ಜನರಲ್ ರಾಜೇಂದ್ರ ಸಿಂಗ್ ಕಡ್ಯಾನ್ ಮತ್ತು ಇನ್ನೊಬ್ಬರು (2000) 6 ಎಸ್ಸಿಸಿ 698 ಮೊಕದ್ದಮೆಯನ್ನು ಅವಲಂಬಿಸಿ ಮಾನ್ಯ ಹಿರಿಯ ನ್ಯಾಯವಾದಿಗಳು ನಿವೇದಿಸಿಕೊಂಡಿರುವುದೇನೆಂದರೆ, ಜೇಷ್ಠತೆ ಮತ್ತು-ಮೆರಿಟ್ ಇದು, ಕೆಲವು ಕನಿಷ್ಠ ಮೆರಿಟ್ಗಳನ್ನು ಅಥವಾ ಈ ಹಿಂದೆ ನಿಗದಿಪಡಿಸಿದ ಮಾನದಂಡದ ಈಡೇರಿಕೆಯನ್ನು ಅಗತ್ಯಪಡಿಸಬೇಕೆಂದು ಅಪೇಕ್ಷಿಸುತ್ತದೆ.ಅತ್ಯಂತ ಮುಖ್ಯವಾಗಿ, ಮುಂಬಡ್ತಿ ದಿನದಂದು ಇದ್ದಂತೆ ಮುಂಬಡ್ತಿ ವಿಷಯವನ್ನು ನಿಯಂತ್ರಿಸುವ ನಿಯಮಗಳನ್ನು ಪರಿಗಣಿಸಬೇಕಾದ ಅಗತ್ಯವಿದೆಯೇ ಹೊರತು, ಪರಿಣಾಮಕಾರಿಯಾಗಿರದ ಹಳೆಯ ನಿಯಮಗಳನ್ನು ಎಂದು ಅವರು ನಿವೇದಿಸಿಕೊಂಡಿದ್ದಾರೆ.ಈ ಸಂಬಂಧದಲ್ಲಿ, ಸರ್ವೋಚ್ಚ ನ್ಯಾಯಾಲಯದ ವಿವಿಧ ತೀರ್ಪುಗಳನ್ನು ಪರಿಗಣಿಸಲಾಗಿದ್ದು, ನಿಯಮಗಳನ್ನು ತಿದ್ದುಪಡಿ ಮಾಡಲು ಎಚ್ಚರಿಕೆಯ ನಿರ್ಣಯವನ್ನು ತೆಗೆದುಕೊಂಡಾಗ, ಮುಂಬಡ್ತಿಯನ್ನು ಪರಿಗಣಿಸಬೇಕಾದ ಸಮಯದಲ್ಲಿ ಚಾಲ್ತಿ ನಿಯಮಗಳಿಗನುಸಾರವಾಗಿ ಮುಂಬಡ್ತಿಗಳನ್ನು ನೀಡಬೇಕಾಗುತ್ತದೆ ಎಂದು ಅಭಿಪ್ರಾಯಪಡಲಾಗಿದೆ ಎಂದು ನಿವೇದಿಸಿಕೊಳ್ಳಲು ದೀಪಕ್ ಅಗರ್ವಾಲ್ ಮತ್ತು ಇನ್ನೊಬ್ಬರು ವಿರುದ್ಧ-ಉತ್ತರ ಪ್ರದೇಶ ರಾಜ್ಯ ಮತ್ತು ಇತರರು (2011) 6 ಎಸ್ಸಿಸಿ 725 ಮೊಕದ್ದಮೆಯನ್ನು ಅವಲಂಬಿಸಿದ್ದಾರೆ.ದೀಪಕ್ ಅಗರ್ವಾಲ್ ಮೊಕದ್ದಮೆಯಲ್ಲಿನ ನಿರ್ಣಯವನ್ನು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ತ್ರಿಪುರ ರಾಜ್ಯ ಮತ್ತು ಇತರರು -ವಿರುದ್ಧ ನಿಖಿಲ್ ರಾಜನ್ ಚಕ್ರಬೊರ್ತಿ ಮತ್ತು ಇತರರು **( 2017 ) 3 ಎಸ್‌ಸಿಸಿ 646** ಮತ್ತು ಭಾರತ ಒಕ್ಕೂಟ ಮತ್ತು ಇತರರು -ವಿರುದ್ಧ-ಕೃಷ್ಣ ಕುಮಾರ್ ಮತ್ತು ಇತರರು**( 2019 ) 4 ಎಸ್‌ಸಿ 319** ಮೊಕದ್ದಮೆಗಳಲ್ಲಿ ಪುನರುಚ್ಚರಿಸಿದೆ ಎಂದು ನಿವೇದಿಸಿಕೊಂಡಿದ್ದಾರೆ.

14. ಇದಕ್ಕೆ ತದ್ವಿರುದ್ಧವಾಗಿ, ಪ್ರತ್ಯರ್ಜಿದಾರರ ಪರ ಹಾಜರಾಗಿದ್ದ ಮಾನ್ಯ ನ್ಯಾಯವಾದಿ ಶ್ರೀ ವಿಜಯ್ ಕುಮಾರ್ ಅವರು ನಿವೇದಿಸಿ ಕೊಂಡಿರುವುದೇನೆಂದರೆ, ವರ್ಗಾವಣೆ ಮೂಲಕ ಪೂರ್ವನಿಶ್ಚಿತ ವೇತನ ಬಡ್ತಿಗಳನ್ನು ಅವರು ಪಡೆಯಬೇಕಿತ್ತೆಂಬ ಸಂಗತಿಯ ಕಾರಣದಿಂದ ಸೇವಾ ವೇಯೇಜ್ನ ಪ್ರಯೋಜನವನ್ನು ಪ್ರತ್ಯರ್ಜಿದಾರರಿಗೆ ನೀಡಲಾಗಿತ್ತು.ಆದುದರಿಂದ, ಪ್ರತ್ಯರ್ಜಿದಾರರ ವಾದವನ್ನು ಪ್ರತ್ಯೇಕವಾಗಿ ಮತ್ತು ವಿಶಿಷ್ಟ ವರ್ಗವಾಗಿ ಪರಿಗಣಿಸಬೇಕಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.ಈ ಸಂಬಂಧದಲ್ಲಿ, ಮಾನ್ಯ ನ್ಯಾಯವಾದಿಗಳು ಏರ್ ಇಂಡಿಯಾ ವಿರುದ್ಧ ನರ್ಗೀಸ್ ಮೀರ್ಝಾ ಮತ್ತು ಇತರರು **( 1981 ) 4 ಎಸ್‌ಸಿ 335** ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಿದ್ದಾರೆ.

15. ಭಾರತ ಒಕ್ಕೂಟ -ವಿರುದ್ಧ-ಫ್ಲೈಟ್ ಕೆಡೆಟ್ ಆಶಿಷ್ ರಾಯ್ಕೊ **( 2006 ) 2 ಎಸ್‌ಸಿಸಿ** ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ನಿರ್ಣಯವನ್ನು ಚ ಅವಲಂಬಿಸಿ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿರುವುದೇನೆಂದರೆ, ನಿರ್ಣಯ ಕೈಗೊಳ್ಳುವ ಸಂಸ್ಥೆಯು, ನಿರ್ಣಯ ಕೈಗೊಳ್ಳುವ ಅದರ ಅಧಿಕಾರವನ್ನು ನಿಯಂತ್ರಿಸುವಂಥ ಕಾನೂನನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಮತ್ತು ಅದನ್ನು ಜಾರಿಗೊಳಿಸಿದರೆ, ಆಡಳಿತಾತ್ಮಕ ವಿಷಯಗಳಲ್ಲಿ ನ್ಯಾಯಿಕ ಪರಿಶೀಲನೆಯ ಅಗತ್ಯ ಕಂಡುಬರುವುದಿಲ್ಲ.ಇಲಾಖಾ ಮುಂಬಡ್ತಿ ಸಮಿತಿಯ (ಸಂಕ್ಷಿಪ್ತವಾಗಿ ಡಿಪಿಸಿ) ಉದ್ದೇಶಕ್ಕಾಗಿ ಮಾಹಿತಿಯನ್ನು ಒದಗಿಸಲು ಅರ್ಜಿದಾರರನ್ನು ಕೇಳಿದ ಮತ್ತು ಅಂಥ ಮಾಹಿತಿಯನ್ನು ಒದಗಿಸಲು ಪ್ರತ್ಯರ್ಜಿದಾರರನ್ನು ಕೇಳಿದ ತನ್ನ ಮೊದಲಿನ ಪತ್ರವನ್ನು ಕೈಬಿಟ್ಟ ಪ್ರತ್ಯರ್ಜಿದಾರ-ನಿಗಮದ ನಿರ್ಣಯವನ್ನು ಬೆಂಬಲಿಸುವ ಸಲುವಾಗಿ ಈ ನಿವೇದನೆಯನ್ನು ಮಾಡಿಕೊಂಡಿರುತ್ತಾರೆ.ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ವರ್ಗಾವಣೆ ಮೂಲಕ ನೇಮಕಾತಿಯನ್ನು ಸಾಧ್ಯವನ್ನಾಗಿಸಿ ಮಂಡಳಿಯ ಆದೇಶಗಳಲ್ಲಿ ಪ್ರತ್ಯರ್ಜಿದಾರರಿಗೆ ಒದಗಿಸಲಾದ ಸೇವಾ ವೇಸ್ಟೇಜ್‌ಅನ್ನು ನಿರ್ಲಕ್ಷಿಸಿ ಪ್ರತ್ಯರ್ಜಿದಾರ ನಿಗಮವು ಮಾಡಿದ್ದ ತನ್ನ ತಪ್ಪನ್ನು ಅರಿತುಕೊಂಡಿತ್ತು ಹಾಗೂ

ಮುಂಬಡ್ತಿಗಾಗಿ ಅರ್ಹರಾಗಲು ಬೇಕಾದ ಎಂಟು ವರ್ಷಗಳ ಕನಿಷ್ಠ ಸೇವೆಯನ್ನು ಅರ್ಜಿದಾರರು ಸಲ್ಲಿಸಿರಲಿಲ್ಲ ಎಂಬ ಸಂಗತಿಯು ಸಹ ಪ್ರತ್ಯರ್ಜಿದಾರ-ನಿಗಮಕ್ಕೆ ಅರಿವಾಯಿತು ಎಂದು ನಿವೇದಿಸಿಕೊಳ್ಳಲಾಗಿದೆ.

16. ಇದಲ್ಲದೆ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ತಿದ್ದುಪಡಿಗಳ ಮೂಲಕ ಅಥವಾ ಯೋಜನೆಯನ್ನು ಹಿಂಪಡೆಯುವ ಮೂಲಕ ಪ್ರತ್ಯರ್ಜಿದಾರರಲ್ಲಿ ನಿಹಿತವಾಗಿರುವ ಹಕ್ಕುಗಳನ್ನು ಕಸಿದುಕೊಳ್ಳಲಾಗುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಈ ಸಂಬಂಧದಲ್ಲಿ, ಶ್ರೀಮತಿ ಬೀಚಿ ಸಯೀದಾ ಮತ್ತು ಇತರರು ವಿರುದ್ಧ ಬಿಹಾರ ರಾಜ್ಯ ಮತ್ತು ಇತರರು(1996) 9 ಎಸ್ಸಿಸಿ 516 ಹಾಗೂ ಆಂಧ್ರ ಪ್ರದೇಶ ಡೈರಿ ಡೆವಲಪ್ಮೆಂಟ್ ಕಾರ್ಪೊರೇಷನ್ ಫೆಡರೇಷನ್ -ವಿರುದ್ಧ-ಬಿ.ನರಸಿಂಹ ರೆಡ್ಡಿ ಮತ್ತು ಇತರರು(2011) 9 ಎಸ್ಸಿಸಿ 286 ಹಾಗೂ ಮಧ್ಯಪ್ರದೇಶ ರಾಜ್ಯ -ವಿರುದ್ಧ ಯೋಗೇಂದ್ರ ಶ್ರೀವಾಸ್ತವ (2010) 12 ಎಸ್ಸಿ 538 ಈ ಮೊಕದ್ದಮೆಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೂರು ನಿರ್ಣಯಗಳನ್ನು ಚ ಅವಲಂಬಿಸಿದ್ದಾರೆ.

17. ಮಾನ್ಯ ನ್ಯಾಯವಾದಿಗಳು,ದಿನಾಂಕ: 03.06.2015 ರ ಆದೇಶದ ಹೊರತಾಗಿ, ವರ್ಗಾವಣೆ ಮೂಲಕ ನೇಮಕಾತಿಯ ಯೋಜನೆಯನ್ನು, ವರ್ಗಾವಣೆ ಮೂಲಕ ನೇಮಕಾತಿ ಮಾರ್ಗವಾಗಿ ಮುಂಬಡ್ತಿ ನೀಡುವ ಕ್ರಮವನ್ನು ಹಿಂಪಡೆಯುವ ಸಂಬಂಧದಲ್ಲಿ ಪ್ರತ್ಯರ್ಜಿದಾರ-ನಿಗಮವು ಕೈಗೊಂಡಿದೆ ಎಂದು ಪ್ರತ್ಯರ್ಜಿದಾರ-ನಿಗಮದ ಕಡೆಯ ಕೆಲವು ಕೃತ್ಯಗಳನ್ನು ಸಹ ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.ಈ ಸಂಬಂಧದಲ್ಲಿ, ವರ್ಗಾವಣೆ ಮೂಲಕ ನೇಮಕಾತಿ ಉಪಬಂಧಗಳನ್ನು ಅನ್ವಯಿಸಿ ಮುಂಬಡ್ತಿಗಳನ್ನು ನೀಡಲಾಗುವದಿನಾಂಕ: 17.06.2019 ರ ಆದೇಶವಾಗಿರುವ ಅನುಬಂಧ ' ಕ್ಯು ' ಕಡೆಗೆ ಈ ನ್ಯಾಯಾಲಯದ ಗಮನವನ್ನು ಸೆಳೆಯಲಾಗಿದೆ.ಆದುದರಿಂದ, ಕಿರಿಯ ಇಂಜಿನಿಯರ್ಗಳ ಹುದ್ದೆಯಿಂದ ಸಹಾಯಕ ಇಂಜಿನಿಯರ್ಗಳ ಹುದ್ದೆಗೆ ವರ್ಗಾವಣೆ ಮೂಲಕ ನೇಮಕಾತಿ ಹೊಂದಿದ್ದ ವ್ಯಕ್ತಿಗಳ ಮುಂಬಡ್ತಿ ವಿಷಯದಲ್ಲಿ, ಪ್ರತ್ಯರ್ಜಿದಾರರಲ್ಲಿ ನಿಹಿತವಾಗಿರುವ ಸೇವಾ ವೇಸ್ಟೇಜ್ಅನ್ನು ಬಿಟ್ಟುಕೊಡದಿರುವುದು ಮುಂದುವರಿಯುತ್ತದೆ ಎಂಬುದು ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದವಾಗಿದೆ.

18. ಮೊಕದ್ದಮೆಯ ಸಂಗತಿಗಳ ಆಧಾರದ ಮೇಲೆ ನಿವೇದಿಸಿ ಕೊಂಡಿರುವುದೇನೆಂದರೆ, ಪ್ರತ್ಯರ್ಜಿದಾರ-ನಿಗಮವುದಿನಾಂಕ: 22.03.2018 ರ ಪತ್ರವನ್ನು ಅರ್ಜಿದಾರರಿಗೆ ನೀಡಿದ್ದಾಗ, ಸಹಾಯಕ ಇಂಜಿನಿಯರ್ಗಳ ವೃಂದದಲ್ಲಿ ಮತ್ತು ಕೆ.ಇ.ಬಿ. ಆರ್ಪಿ ವಿನಿಯಮಗಳ ಪ್ರಕಾರ ಅವರು 8 ವರ್ಷಗಳ ಸೇವೆಯನ್ನು ಪೂರ್ಣಗಳಿಸಿರಲಿಲ್ಲ; ಸಹಾಯಕ ಕಾರನಿರ್ವಾಹಕ ಇಂಜಿನಿಯರ್ ವೃಂದಕ್ಕೆ ಮುಂಬಡ್ತಿ ಪಡೆಯಲು ಅರ್ಹನಾಗಲು ಒಬ್ಬ ವ್ಯಕ್ತಿಯು ಸಹಾಯಕ ಇಂಜಿನಿಯರ್ ವೃಂದದಲ್ಲಿ ಕನಿಷ್ಠ 8 ವರ್ಷಗಳ ಸೇವೆಯನ್ನು ಸಲ್ಲಿಸಿರಬೇಕು.ಇದಕ್ಕೆ ತದ್ವಿರುದ್ಧವಾಗಿ, ' ವರ್ಗಾವಣೆ ಮೂಲಕ ನೇಮಕಾತಿ ' ಯೋಜನೆ ಮೇರೆಗೆ ಪ್ರತ್ಯರ್ಜಿದಾರರಲ್ಲಿ ನಿಹಿತವಾದ ಸೇವಾ ವೇಯೇಜ್ಅನ್ನು ಸೇರಿಸುವ ಮೂಲಕ, ಪ್ರತ್ಯರ್ಜಿದಾರರು ಮುಂಬಡ್ತಿಗೆ ಅರ್ಹರಾಗಿದ್ದರು ಎಂಬುದು ಪ್ರತ್ಯರ್ಜಿದಾರ-ನಿಗಮಕ್ಕೆ ಅರಿವಾಗಿತ್ತು.ಆದುದರಿಂದ, ಮುಂಬಡ್ತಿಗೆ ಪರಿಗಣಿತರಾಗುವ ಅರ್ಹತೆಯನ್ನು ಅರ್ಜಿದಾರರು ಹೊಂದಿರಲಿಲ್ಲವಾದ್ದರಿಂದ, ರಿಟ್ ಅರ್ಜಿಗಳು ಸಮರ್ಥನೀಯವಲ್ಲ; ಇನ್ನೊಂದೆಡೆ, ಮುಂಬಡ್ತಿಗಾಗಿ ಪರಿಗಣಿತರಾಗುವ ಪ್ರತ್ಯರ್ಜಿದಾರರ ಕಾನೂನುಬದ್ಧ ಹಕ್ಕುಗಳನ್ನು ಅಲ್ಲಗಳೆಯುವ ಮೂಲಕ, ಅರ್ಜಿದಾರರು ಈ ನ್ಯಾಯಾಲಯದಿಂದ ಮಧ್ಯಂತರ ಆದೇಶವನ್ನು ಪಡೆದಿರುವ ತಪ್ಪಿತಸ್ಥರಾಗಿರುವರು ಎಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.ಆದುದರಿಂದ,

ಹೆಚ್ಚಿನ ವೆಚ್ಚಗಳನ್ನು ವಿಧಿಸುವ ಮೂಲಕ ರಿಟ್ ಅರ್ಜಿಗಳನ್ನು ವಜಾಗೊಳಿಸಬೇಕಾದ ಅಗತ್ಯವಿದೆ ಎಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.

19. ಇತರ ವಿಷಯಗಳ ಜೊತೆಗೆ, ನೌಕರರು ಮುಂಬಡ್ತಿಗಾಗಿ ಪರಿಗಣಿತರಾಗುವ ಹಕ್ಕನ್ನು ಹೊಂದಿರಲಿಲ್ಲವೆಂದು ವಾದಿಸಿ ಪ್ರತ್ಯರ್ಜಿದಾರರು ಸಲ್ಲಿಸಿದ ರಿಟ್ ಅರ್ಜಿಯಲ್ಲಿ, ಎಂದರೆ ರಿಟ್ ಅರ್ಜಿಸಂಖ್ಯೆ: 1670/2020 ರಲ್ಲಿ, ಆಕ್ಷೇಪಣೆಗಳ ಹೇಳಿಕೆಯನ್ನು ಪ್ರತ್ಯರ್ಜಿದಾರ-ನಿಗಮವು ಸಲ್ಲಿಸಿರುವುದಿಲ್ಲ.ಒಬ್ಬ ನೌಕರನು ಮುಂಬಡ್ತಿಗಾಗಿ ಪರಿಗಣಿತನಾಗುವ ಹಕ್ಕನ್ನು ಹೊಂದಿರಬಹುದು.ಏನೇ ಇರಲಿ, ವರ್ಗಾವಣೆ ಮೂಲಕ ನೇಮಕಾತಿ ಸಂಬಂಧದ ಉಪಬಂಧವನ್ನುದಿನಾಂಕ: 03.06.2015 ರ ಮಂಡಳಿ ಆದೇಶದ ಮೂಲಕ ಒಮ್ಮೆ ಹಿಂತೆಗೆದುಕೊಂಡಾಗ, ಅಸ್ತಿತ್ವದಲ್ಲಿಲ್ಲದಿದ್ದ ವಿನಿಯಮದ ಮೇರೆಗೆ ಪ್ರತ್ಯರ್ಜಿದಾರರ ಸಂಬಂಧದಲ್ಲಿ ಸೇವಾ ವೇಲ್ವೇಜ್ಅನ್ನು ಪರಿಗಣಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. 'ವರ್ಗಾವಣೆ ಮೂಲಕ ನೇಮಕಾತಿ ' ಸಂಬಂಧದ ಉಪಬಂಧವನ್ನು ಹಾಗೂ ವಿನಿಯಮದ/ವರ್ಗಾವಣೆ ಮೂಲಕ ನೇಮಕಾತಿ ' ಸಂಬಂಧದ ಯೋಜನೆಯ ಮೇರೆಗೆ ದೊರಕುತ್ತಿದ್ದ ಎಲ್ಲ ಇತರ ಪ್ರಯೋಜನಗಳನ್ನು ಹಿಂಪಡೆದಿದ್ದ ಹಿನ್ನೆಲೆಯಲ್ಲಿ, ಮುಂಬಡ್ತಿಗಾಗಿ ಸೇವಾ ವೇಸ್ಟೇಜ್ ನೀಡುವುದಕ್ಕಾಗಿ ಪ್ರತ್ಯರ್ಜಿದಾರರ ಪರ ಯಾವುದೇ ನಿಯಮ ಅಥವಾ ಉಪಬಂಧ ಉಳಿದಿರಲಿಲ್ಲ ಎಂದು ಪ್ರತ್ಯರ್ಜಿದಾರ-ನಿಗಮದ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.

20. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಪಿ. ಎಸ್. ರಾಜಗೋಪಾಲ್, ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ವಿಜಯ್ ಕುಮಾರ್, ಪ್ರತ್ಯರ್ಜಿದಾರ ನಿಗಮದ ಪರ ಮಾನ್ಯ ನ್ಯಾಯವಾದಿ ಶ್ರೀ ಶ್ರೀರಂಗ ಇವರುಗಳ ವಾದಗಳನ್ನು ಆಲಿಸಲಾಯಿತು ಮತ್ತು ಅರ್ಜಿಗಳನ್ನು ಅವಲೋಕಿಸಲಾಯಿತು.

21. ಡಿಪ್ಲೊಮಾ ಪಡೆದವರ ಪೂರ್ವಾನ್ವಯ ನೇಮಕಾತಿಯನ್ನು ಒಳಗೊಂಡು, " ವರ್ಗಾವಣೆ ಮೂಲಕ ನೇಮಕಾತಿಯ ಇ ೦ ತಹುದೇ ಉಪಬಂಧದ ಸಿಂಧುತ್ವ ಮತ್ತು ಅಂಥ ಉಪಬಂಧಗಳ ಅಡಿಯಲ್ಲಿ ಒದಗಿಸಿದ ಜೇಷ್ಠತೆಯು, ಕೆ. ನಾರಾಯಣನ್ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಚ ಪರಿಗಣನೆಗೆ ಬಂದಿರುತ್ತವೆ.ಮಾನ್ಯ ಹಿರಿಯ ನ್ಯಾಯವಾದಿಗಳು, ದಿನಾಂಕ:01.01.1976 ರಿಂದ ಪೂರ್ವಾನ್ವಯವಾಗಿ ಅನುಷ್ಠಾನಗೊಳಿಸಿರುವುದನ್ನು ವಿರೋಧಿಸುವಾಗ, ಡಿಪ್ಲೊಮಾ ಪಡೆದವರು ಪದವಿಯನ್ನು ಪಡೆದ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಯಾಗುವಂತೆ ವರ್ಗಾವಣೆಗಾಗಿ ಉಪಬಂಧ ಕಲ್ಪಿಸಿರುವ ಟಿಪ್ಪಣಿ(ii) ನ್ನು, ಅರ್ಹತೆಯನ್ನು ಕಲ್ಪಿಸುವುದಕ್ಕೆ ಮಾತ್ರವೇ ಎಂಬುದಾಗಿ ಓದಬೇಕೆಂದು ನಿರ್ದೇಶಿಸಲಾಗಿತ್ತು ಎಂದು ಸರಿಯಾಗಿಯೇ ನಿವೇದಿಸಿಕೊಂಡಿದ್ದಾರೆ.ದಿನಾಂಕ: 16.08.1996 ರ ಮತ್ತು 27.12.1996 ರ ಮಂಡಳಿ ಆದೇಶಗಳ ಮೂಲಕ, ' ವರ್ಗಾವಣೆ ಮೂಲಕ ನೇಮಕಾತಿ ' ಉಪಬಂಧಕ್ಕೆ ಸೂಕ್ತ ಬದಲಾವಣೆಗಳನ್ನು ತರಲಾಗಿತ್ತು.ಸದರಿ ಉಪಬಂಧದ ಅಡಿಯಲ್ಲಿ ಪ್ರತ್ಯರ್ಜಿದಾರರು ವರ್ಗಾವಣೆ ಮೂಲಕ ನೇಮಕಾತಿಯಾದಾಗ, ನೇರ ನೇಮಕಾತಿ ಪಡೆದವರ, ಎಂದರೆ ಇದರಲ್ಲಿನ ಅರ್ಜಿದಾರರ ಕೆಳಗೆ ತರಲಾಗಿತ್ತು.ವರ್ಗಾವಣೆ ಮೂಲಕ ನೇಮಕಾತಿಗೊಂಡ ಪ್ರತ್ಯರ್ಜಿದಾರರಿಗೆ ಉಳಿದ ಪ್ರಯೋಜನವೆಂದರೆ, ಸಹಾಯಕ ಕಾರನಿರ್ವಾಹಕ ಇಂಜಿನಿಯರ್ಗಳ ಹುದ್ದೆಗೆ ಮುಂಬಡ್ತಿಗಾಗಿ ಅವರ ಅರ್ಹತೆಯನ್ನು ಪರಿಗಣಿಸುವ ಉದ್ದೇಶಕ್ಕಾಗಿ ಗರಿಷ್ಠ ನಾಲ್ಕು ವರ್ಷಗಳಿಗೆ ಒಳಪಟ್ಟು, ಕಿರಿಯ ಇಂಜಿನಿಯರ್ಗಳಾಗಿ ಅವರು ಸಲ್ಲಿಸಿದ ಸೇವೆಯ ಮೂರನೇ ಒಂದರಷ್ಟು ವರ್ಷಗಳನ್ನು ಗಣನೆಗೆ ತೆಗೆದುಕೊಳ್ಳುವ ಹಕ್ಕು ಆಗಿತ್ತು.

22. ಆದುದರಿಂದ, ಅಂಥ ಪ್ರಯೋಜನವನ್ನು ನಿಹಿತ ಹಕ್ಕು ಎಂದು ಪರಿಗಣಿಸಬೇಕೇ ಮತ್ತು ' ವರ್ಗಾವಣೆ ಮೂಲಕ ನೇಮಕಾತಿ ' ಸಂಬಂಧದ ಪ್ರಯೋಜನವನ್ನು ಹಿಂತೆಗೆದುಕೊಳ್ಳುವ ಮೂಲಕ ಅಂಥ ಪ್ರಯೋಜನವನ್ನು ಪ್ರತ್ಯರ್ಜಿದಾರರಿಂದ ಕಸಿದುಕೊಳ್ಳಬೇಕೇ ಎಂಬುದು ಚರ್ಚಾಸ್ಪದ ವಿಷಯವಾಗಿದೆ.ಅರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು ಪ್ರಸ್ತಾಪಿಸಿದ ನಿರ್ಣಯಗಳು, ಮುಂಬಡ್ತಿ ಸಮಯದಲ್ಲಿ ಚಾಲ್ತಿಯಲ್ಲಿದ್ದ ನಿಯಮಗಳಿಗನುಸಾರವಾಗಿ ಮುಂಬಡ್ತಿ ನೀಡಬೇಕೇ ಅಥವಾ ಹಿಂದಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಇದ್ದ ಹಳೆಯ ನಿಯಮಗಳಿಗನುಸಾರವಾಗಿ ಮುಂಬಡ್ತಿ ನೀಡಬೇಕೇ ಎಂಬ ಪ್ರಸ್ತಾವನೆಯನ್ನು D ಆಧರಿಸಿವೆ.ಆ ಸಂದರ್ಭದಲ್ಲಿ, ದೀಪಕ್ ಅಗರ್ವಾಲ್ ಮೊಕದ್ದಮೆಯಲ್ಲಿ, ಖಾಲಿ ಹುದ್ದೆಗಳು ಸೃಜನೆಯಾದ ದಿನಾಂಕದಂದು ಅಸ್ತಿತ್ವದಲ್ಲಿದ್ದ ಕಾನೂನು ಬದಲಾಗದಂತೆ ಆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕೆಂಬ ಯಾವುದೇ ಸಾರ್ವಕಾಲಿಕ ನಿಯಮ ಅಥವಾ ನಿರುಪಾಧಿಕ ಅನ್ವಯತೆ ಇಲ್ಲವೆಂದು ಅಭಿಪ್ರಾಯಪಡಲಾಗಿದೆ.ಹಿಂದಿನ ನಿಯಮಗಳ ಮೇರೆಗೆ ಹಿಂದಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಅಗತ್ಯತೆಯನ್ನು, ಮುಂಬಡ್ತಿಗಾಗಿ ಪರಿಗಣಿತವಾಗಬೇಕಾದ ಹಕ್ಕನ್ನು ಅಭ್ಯರ್ಥಿಯು ಆರ್ಜಿಸುವುದರೊಂದಿಗೆ ಸಂಬಂಧ ಕಲ್ಪಿಸಲಾಗಿದೆ.ಸಹಜವಾಗಿಯೇ, ವೈ. ವಿ. ರಂಗಯ್ಯ -ವಿರುದ್ಧ ಜೆ. ಶ್ರೀನಿವಾಸ ರಾವ್ ಮೊಕದ್ದಮೆಯಲ್ಲಿ ಇದ್ದಂತೆ, ಅನ್ವಯವಾಗಬಹುದಾದ ನಿಯಮವನ್ನು ಯಾವುದೇ ನಿರ್ದಿಷ್ಟ ಕಾಲ-ಚೌಕಟ್ಟಿನೊಳಗೆ ವಿಧಿಸಿದ ಹೊರತು, ಅರ್ಹ ಅಭ್ಯರ್ಥಿಗಳ ಪರಿಗಣನೆಯ ದಿನಾಂಕದ ಆಧಾರದ ಮೇಲೆ ಒದಗಿಬರುವ ಮುಂಬಡ್ತಿ ಸಂಬಂಧದಲ್ಲಿನ ಹಕ್ಕನ್ನು ಪರಿಗಣಿಸಬೇಕಾಗುತ್ತದೆ ಎಂದು ಅಭಿಪ್ರಾಯಪಡಲಾಗಿತ್ತು.

23. ಆದರೆ ಪ್ರಸ್ತುತ ಮೊಕದ್ದಮೆಯಲ್ಲಿ, ಮೇಲೆ ಗಮನಿಸಲಾದಂತೆ, ಸಹಾಯಕ ಕಾರನಿರ್ವಾಹಕ ಇಂಜಿನಿಯರ್ಗಳ ಹುದ್ದೆಗೆ ಮುಂಬಡ್ತಿಯ ಉದ್ದೇಶಕ್ಕಾಗಿ, ' ವರ್ಗಾವಣೆ ಮೂಲಕ ನೇಮಕಾತಿ'ಗಳಿಗಾಗಿನ ಉಪಬಂಧದ ಟಿಪ್ಪಣಿ ( V) ರ ಪ್ರಕಾರ, ಕಿರಿಯ ಇಂಜಿನಿಯರ್ಗಳ ವೃಂದದಲ್ಲಿ ಪ್ರತ್ಯರ್ಜಿದಾರರು ಸಲ್ಲಿಸಿದ ಮೂರನೇ ಎರಡರಷ್ಟು ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಪ್ರಯೋಜನವು,ದಿನಾಂಕ: 03.06.2015 ರಂದು ಇದ್ದಂತೆ ಅಂಥ ಉಪಬಂಧಗಳನ್ನು ಹಿಂತೆಗೆದುಕೊಳ್ಳುವ ಮೂಲಕ ಅನೂರ್ಜಿತಗೊಂಡಿರುತ್ತದೆಯೇ?ಸದರಿ ಪ್ರಯೋಜನವು ಪ್ರತ್ಯರ್ಜಿದಾರರ ಪರ ಹಕ್ಕನ್ನು ನಿಹಿತಗೊಳಿಸುತ್ತದೆಯೇ?ಮತ್ತು ಹಾಗಿದ್ದರೆ, ಅಂಥ ಪ್ರಯೋಜನವನ್ನು ಕಾನೂನಿನ ಉಪಬಂಧವನ್ನು ಹಿಂತೆಗೆದುಕೊಳ್ಳುವ ಮೂಲಕ ಕಸಿದುಕೊಳ್ಳಲಾಗಿದೆಯೇ?ಎಂಬುವವು ಪರಿಗಣಿಸಬೇಕಾದ ಅಗತ್ಯವಿರುವ ಪ್ರಶ್ನೆಗಳಾಗಿವೆ.

24. ಈ ಸ ಂ ಬ ಂ ಧದಲ್ಲಿ, ನಿವೃತ್ತ ಕ್ಯಾಪ್ಟನ್ ಕೆ.ಸಿ. ಅರೋರ ಮತ್ತು ಇನ್ನೊಬ್ಬರು -ವಿರುದ್ಧ ಹರಿಯಾಣ ರಾಜ್ಯ ಮತ್ತು ಇತರರು 13 ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು ಗಮನಿಸಿರುವುದೇನೆಂದರೆ, 1960 ರ ದಶಕದಲ್ಲಿ, ಚ ಚೀನಿಯರ ಆಕ್ರಮಣದ ಕಾಲಾವಧಿಯಲ್ಲಿ, ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು, ರಾಷ್ಟ್ರೀಯ ತುರ್ತು ಪರಿಸ್ಥಿತಿಯ ವಿಷಮ ಸಂದರ್ಭದಲ್ಲಿ ಸೈನಿಕ ಸೇವೆಗೆ ಸೇರುವ ತರುಣ ಉತ್ಸಾಹಿ ಯುವಕರನ್ನು ಪ್ರೋತ್ಸಾಹಿಸಲು ಕೆಲವು ಪ್ರಯೋಜನಗಳನ್ನು ನೀಡಲು ನಿರ್ಧರಿಸಿದ್ದವು.ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರವು ಬೇರೆ ಬೇರೆ ಸುತ್ತೋಲೆಗಳನ್ನು ಹೊರಡಿಸಿ ಹಾಗೂ ಆಕಾಶವಾಣಿ (ರೇಡಿಯೋ) ಮತ್ತು ಪತ್ರಿಕೆಗಳಲ್ಲಿ ಜಾಹಿರಾತುಗಳನ್ನು ನೀಡಿ, ವಿಷಮ ಸಂದರ್ಭದಲ್ಲಿ ಸೈನಿಕ ಸೇವೆಗೆ ಸೇರಿದ್ದ ಯುವಕರಿಗೆ ಕೆಲವೊಂದು ಪ್ರಯೋಜನಗಳ ಭರವಸೆ ನೀಡಿದ್ದವು.ತರುವಾಯ, ಈ ಭರವಸೆಗಳನ್ನು ನಿಯಮಗಳನ್ನಾಗಿ ಪರಿವರ್ತಿಸಲಾಯಿತು.ಸರ್ಕಾರವು ನೀಡಿದ ಅಂಥ ಭರವಸೆಗಳ ಪೈಕಿ, ಜೇಷ್ಠತೆ, ವೇತನ ಬಡ್ತಿ ಮತ್ತು ಪಿಂಚಣಿ, ಮುಂತಾದವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಸೈನಿಕ ಸೇವಾವಧಿಯನ್ನು ಲೆಕ್ಕ ಹಾಕುವ ಮೂಲಕ ಜೇಷ್ಠತೆ

ನೀಡುವುದು ಸರ್ಕಾರವು ನೀಡಿದಂಥ ಒಂದು ಭರವಸೆಯಾಗಿತ್ತು.ಅದರಲ್ಲಿನ ಅರ್ಜಿದಾರರನ್ನು ತಾತ್ಕಾಲಿಕ ಸಹಾಯಕ ಇಂಜಿನಿಯರ್ಗಳಾಗಿ ನೇಮಕ ಮಾಡಿಕೊಂಡ ಕೂಡಲೇ, ಅವರ ಸೈನಿಕ ಸೇವೆಯ ಪ್ರಯೋಜನವನ್ನು ಅವರಿಗೆ ನೀಡಿ ಅವರ ಜೇಷ್ಠತೆಯನ್ನು ನಿಗದಿಪಡಿಸುವ ಸಂಬಂಧದಲ್ಲಿ ಅವರು ಹಕ್ಕುಳ್ಳವರಾದರಾದರೂ, ಸಿದ್ಧಪಡಿಸಲಾಗಿದ್ದ ಶ್ರೇಣೀಕರಣ ಪಟ್ಟಿಯು, ಅರ್ಜಿದಾರರ ಜೇಷ್ಠತೆಯನ್ನು ನಿಗದಿಪಡಿಸುವ ಉದ್ದೇಶಕ್ಕಾಗಿ ಅವರ ಸೈನಿಕ ಸೇವೆಯನ್ನು ಒಳಗೊಂಡಿರಲಿಲ್ಲ.ಇದ್ದಕ್ಕೆ ತದ್ವಿರುದ್ಧವಾಗಿ, ಪೂರ್ವಾನ್ವಯ ಪರಿಣಾಮದೊಂದಿಗೆ, ಸೈನಿಕ ಸೇವೆಯ ಪ್ರಯೋಜನವನ್ನು ನಿರ್ಬಂಧಿಸಿ ಸಂಬಂಧಪಟ್ಟ ನಿಯಮಗಳಿಗೆ ತಿದ್ದುಪಡಿಯನ್ನು ತರಲಾಯಿತು.ಅಪೀಲುದಾರರ/ಅರ್ಜಿದಾರರ ವಾದವೆಂದರೆ, ನಿಹಿತ ಹಕ್ಕುಗಳಿಂದ ಅವರನ್ನು ವಂಚಿತಗೊಳಿಸಲು ಪೂರ್ವಾನ್ವಯ ಪರಿಣಾಮದೊಂದಿಗೆ ನಿಯಮಗಳಿಗೆ ತಿದ್ದುಪಡಿ ಮಾಡಬಾರದಿತ್ತು ಮತ್ತು ಅಪೀಲುದಾರರು/ಅರ್ಜಿದಾರರು, ಅತ್ಯಗತ್ಯವಾಗಿ ಸೈನಿಕ ಸೇವೆಗಳ ಪ್ರಯೋಜನಕ್ಕೆ ಅರ್ಹರಾಗಿದ್ದರೆ, ಅವರು ಇತರರಿಗಿಂತ ಅತ್ಯಂತ ಹೆಚ್ಚು ಜೇಷ್ಠರಾಗಿರಬೇಕಿತ್ತು ಮತ್ತು ಸೈನಿಕ ಸೇವೆಯನ್ನು ಸಂಪೂರ್ಣವಾಗಿ ಉಪೇಕ್ಷಿಸಿ ಶ್ರೇಣೀಕರಣ ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಅದು ಕಾನೂನಿಗನುಸಾರವಾಗಿರುವುದಿಲ್ಲ.

25. ಇಂಥ ನಿವೇದನೆಗಳನ್ನು ಪರಿಗಣಿಸಿ, ವ್ಯಕ್ತವಾಗಿ ಹೇಳಿದ ಅಥವಾ ಪೂರ್ವಾನ್ವಯ ಪರಿಣಾಮ ಹೊಂದಲು ಅವಶ್ಯಕ ಸೂಚನೆಯ ಮೂಲಕ ಹೊರತು ಪ್ರತಿಯೊಂದು ಶಾಸನವು ಮೊದಲ ನೋಟದಲ್ಲೇ ಭವಿಷ್ಯವರ್ತಿಯಾಗಿರುತ್ತದೆ.ಆದರೆ, ನಿಹಿತ ಹಕ್ಕುಗಳ ಸಾಮಾನ್ಯ ನಿಯಮವು, ಶಾಸನದ ಉದ್ದೇಶವು ನಿಹಿತ ಹಕ್ಕುಗಳನ್ನು ಬಾಧಿಸುವ ಅಥವಾ ಹೊಸ ಹೊಣೆಗಾರಿಕೆಯನ್ನು ವಿಧಿಸುವ ಅಥವಾ ಅಸ್ತಿತ್ವದಲ್ಲಿರುವ ಬಾಧ್ಯತೆಗಳನ್ನು ದುರ್ಬಲಗೊಳಿಸುವ ಕಡೆಯಲ್ಲಿ ಅನ್ವಯವಾಗುತ್ತದೆ.ಶಾಸನವನ್ನು ಹೊರಡಿಸುವಾಗ ಅಸ್ತಿತ್ವದಲ್ಲಿದ್ದ ಹಕ್ಕನ್ನು ಪ್ರಸ್ತಾಪಿಸಿರುವ ಉಪಬಂಧಗಳು, ವ್ಯಕ್ತ ಅಧಿನಿಯಮಿತಿ ಅಥವಾ ಅವಶ್ಯಕ ಆಶಯ ಇಲ್ಲದಿರುವಲ್ಲಿ ಪೂರ್ವಾನ್ವಯವಾಗಿ ಅನ್ವಯವಾಗಬೇಕಿಲ್ಲ.ಆದುದರಿಂದ, ರಾಜ್ಯಪಾಲರು ನಿಸ್ಸಂಶಯವಾಗಿ, ಪೂರ್ವಾನ್ವಯವಾಗಿ ಅಥವಾ ಪೂರ್ವಾನ್ವಯ ಪರಿಣಾಮದೊಂದಿಗೆ ತಿದ್ದುಪಡಿಯನ್ನು ತರಲು ಸಂವಿಧಾನದ 309 ನೇ ಅನುಚ್ಛೇದದ ಅಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸಬಹುದಾಗಿದೆ ಎಂದು ಅಭಿಪ್ರಾಯಪಡಲಾಗಿತ್ತು.

26. ಆದಾಗ್ಯೂ, ಗುಜರಾತ್ ರಾಜ್ಯ ವಿರುದ್ಧ ರಮಣ್ ಲಾಲ್ ಕೇಶವ್ ಲಾಲ್ ಸೋನಿ 14 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಸಾಂವಿಧಾನಿಕ ಚ ಪೀಠದ ನಿರ್ಣಯವನ್ನು ಸರ್ವೋಚ್ಚ ನ್ಯಾಯಾಲಯವು ಗಮನಕ್ಕೆ ತೆಗೆದುಕೊಂಡಿದ್ದು, ಅದರಲ್ಲಿ, ಕಾರ್ಯದರ್ಶಿಗಳಾಗಿ, ಅಧಿಕಾರಿಗಳಾಗಿ ಮತ್ತು ಗ್ರಾಮ ಸೇವಕರಾಗಿ ಪಂಚಾಯತ್ ಸೇವೆಗೆ ಹಂಚಿಕೆಯಾಗಿ ಸರ್ಕಾರಿ ನೌಕರರ ಸ್ಥಾನಮಾನ ಸಾಧಿಸಿದ್ದ ಗ್ರಾಮ ಮತ್ತು ನಗರ ಪಂಚಾಯತ್ಗಳ ಮಾಜಿ-ಪುರಸಭಾ ನೌಕರರು, ತಿದ್ದುಪಡಿಯಾದ ನಿಯಮದ ಕಾರಣದಿಂದ ಸದರಿ ಸ್ಥಾನಮಾನಗಳಿಂದ ವಂಚಿತರಾಗಿದ್ದರು.ಸಾಂವಿಧಾನಿಕ ಪೀಠದ ಅಭಿಪ್ರಾಯದ ಪ್ರಕಾರ, ಎಲ್ಲಿಯವರೆಗೆ ಹುದ್ದೆಗಳನ್ನು ರದ್ದುಗೊಳಿಸಿರಲಿಲ್ಲವೋ ಮತ್ತು ಅವರ ಸೇವೆಗಳನ್ನು ಸಂವಿಧಾನದ 311 ನೇ ಅನುಚ್ಛೇದದ 0 ಉಪಬಂಧಗಳಿಗನುಸಾರವಾಗಿ ಕೊನೆಗೊಳಿಸಿರಲಿಲ್ಲವೋ, ಅಲ್ಲಿಯವರೆಗೆ ಸರ್ಕಾರಿ ನೌಕರರಾಗಿ ಅವರ ಸ್ಥಾನಮಾನಗಳನ್ನು ಇಲ್ಲವಾಗಿಸಲಾಗುವುದಿಲ್ಲ ಅಥವಾ ವಿಭಿನ್ನವಾಗಿ ನಡೆಸಿಕೊಳ್ಳುವುದಕ್ಕಾಗಿ ಅವರನ್ನು ಏಕಾಂಗಿಯಾಗಿಸುವುದು ಅನುಮತೀಯವಾಗಿರಲಿಲ್ಲ; ಅದು, ಸಂವಿಧಾನದ 14 ನೇ ಅನುಚ್ಛೇದದ ಉಲ್ಲಂಘನೆಯಾಗುವುದು.ಮಾನ್ಯ ನ್ಯಾಯಾಧೀಶರು, " ಇಂದು ದೊರೆತ ಸಾಂವಿಧಾನಿಕ ಹಕ್ಕುಗಳನ್ನು 17

ವರ್ಷಗಳ ಹಿಂದೆ ಅಸ್ತಿತ್ವದಲ್ಲಿದ್ದ ಸನ್ನಿವೇಶಕ್ಕೆ ಕೃತಕವಾಗಿ ಪ್ರತ್ಯಾವರ್ತಿಸುವ ಮೂಲಕ ಅನೂರ್ಜಿತಗೊಳಿಸಲು ಕಾನೂನನ್ನು ರಚಿಸಬಹುದೇ? "ಎಂಬ ಭಾವೋತ್ತೇಜಕ ಪ್ರಶ್ನೆಯನ್ನು ಒಡ್ಡಿ, ' ಇಲ್ಲ ' ಎಂಬ ಮಾರ್ಮಿಕವಾದ ಉತ್ತರವನ್ನು ನೀಡಿದ್ದಾರೆ.ಸಾಂವಿಧಾನಿಕ ಪೀಠದ ನಿರ್ಣಯವನ್ನು ಗಮನದಲ್ಲಿರಿಸಿಕೊಂಡು, ಹರಿಯಾಣ ಸರ್ಕಾರವು, ಪೂರ್ವಾನ್ವಯ ಪರಿಣಾಮದೊಂದಿಗೆ ನಿಯಮಗಳನ್ನು ತಿದ್ದುಪಡಿ ಮಾಡುವ ಮೂಲಕ, ಅರ್ಜಿದಾರರಿಗೆ ಮತ್ತು ಅಪೀಲುದಾರರಿಗೆ ದೊರೆತ ಹಕ್ಕನ್ನು ಕಸಿದುಕೊಳ್ಳಲಾಗುವುದಿಲ್ಲವೆಂದು ಅಭಿಪ್ರಾಯಪಡಲಾಯಿತು.

27. ಟಿ. ಆರ್. ಕಪೂರ್ ಮತ್ತು ಇತರರು -ವಿರುದ್ಧ ಹರಿಯಾಣ ರಾಜ್ಯ ಮತ್ತು ಇತರರು ಮೊಕದ್ದಮೆಯಲ್ಲಿ ಅಭಿಪ್ರಾಯಪಟ್ಟಿರುವ ಪ್ರಕಾರ, ತಿದ್ದುಪಡಿಯಾಗದ 6 (ಬಿ) ನಿಯಮವು ಅರ್ಜಿದಾರರಂಥ ವ್ಯಕ್ತಿಗಳಿಗೆ ನಿಹಿತ ಹಕ್ಕನ್ನು ಪ್ರದಾನ ಮಾಡಿದ್ದು, ಅದನ್ನು 6 (ಬಿ) ನಿಯಮದ ಪೂರ್ವಾನ್ವಯ ತಿದ್ದುಪಡಿಯ ಮೂಲಕ ಕಸಿದುಕೊಳ್ಳಲಾಗುವುದಿಲ್ಲ.ಮುಂಬಡ್ತಿಗಾಗಿ ಪರಿಗಣಿತವಾಗಬೇಕಾದ ವ್ಯಕ್ತಿಯ ಹಕ್ಕನ್ನು ಬಾಧಿಸುವ ಯಾವುದೇ ನಿಯಮವು, ಮುಂಬಡ್ತಿಯ ಅವಕಾಶವು ಇಲ್ಲದಿರಬಹುದಾದರೂ ಸಹ, ಒಂದು ಸೇವಾ ಷರತ್ತಾಗಿದೆ.309 ನೇ ಅನುಚ್ಛೇದದ ಉಪಬಂಧದ ಅಡಿಯಲ್ಲಿನ ಸೇವಾ ಷರತ್ತುಗಳನ್ನು ವಿನಿಯಮಿಸುವ ನಿಯಮಗಳನ್ನು ರಚಿಸುವ ಅಧಿಕಾರವು, ಪೂರ್ವಾನ್ವಯ ಪರಿಣಾಮದೊಂದಿಗೆ ನಿಯಮಗಳನ್ನು ತಿದ್ದುಪಡಿ ಮಾಡುವ ಅಥವಾ ಬದಲಾಯಿಸುವ ಅಧಿಕಾರವನ್ನು ಒಳಗೊಂಡಿರುತ್ತದೆ.ಮುಂಬಡ್ತಿಗಾಗಿ ಶಿಕ್ಷಣಾರ್ಹತೆಗಳನ್ನು ವಿಧಿಸುವ ಸಕ್ಷಮ ಪ್ರಾಧಿಕಾರವು, ಶಿಕ್ಷಣಾರ್ಹತೆಗಳನ್ನು ಬದಲಾಯಿಸಲು ಸಹ ಸಕ್ಷಮವಾಗಿರುತ್ತದೆ.ಆದಾಗ್ಯೂ, ಈ ನಿಯಮವು, ಅಸ್ತಿತ್ವದಲ್ಲಿರುವ ನಿಯಮಗಳ ಅಡಿಯಲ್ಲಿ ಆರ್ಜಿಸಿದ ಪ್ರಯೋಜನಗಳನ್ನು ಪೂರ್ವಾನ್ವಯ ಪರಿಣಾಮದೊಂದಿಗೆ ತಿದ್ದುಪಡಿ ಮಾಡುವ ಮೂಲಕ ಕಸಿದುಕೊಳ್ಳಲಾಗುವುದಿಲ್ಲ ಎಂಬ ಅಂಗೀಕೃತ ತತ್ವಕ್ಕೆ ಒಳಪಟ್ಟಿರುತ್ತದೆ; ಎಂದರೆ, 309 ನೇ ಅನುಚ್ಛೇದದ ಉಪಬಂಧದ ಅಡಿಯಲ್ಲಿ, ನಿಹಿತ ಹಕ್ಕುಗಳನ್ನು ಪರಿಣಮಿಸುವ ಅಥವಾ ದುರ್ಬಲಗೊಳಿಸುವಂಥ ನಿಯಮವನ್ನು ರಚಿಸುವ ಯಾವುದೇ ಅಧಿಕಾರವಿಲ್ಲ.

28. ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಮತ್ತು ಇತರರು ವಿರುದ್ಧ ಓಂ ಪ್ರಕಾಶ್ ಶರ್ಮ ಮತ್ತು ಇತರರು ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು ನಿಯಮದ ಪೂರ್ವಾನ್ವಯ ಅನುಷ್ಠಾನ ಮತ್ತು ಪದವೀಧರರಲ್ಲದವರಿಗೆ ನಿಯಮ ಅನ್ವಯಿಸದಿರುವುದನ್ನು ಉಲ್ಲೇಖಿಸುವುದರೊಂದಿಗೆ ಪದವೀಧರರಲ್ಲದವರು ಮಂಡಿಸಿದ ವಾದವನ್ನು ಕುರಿತು ವ್ಯವಹರಿಸುವಾಗ, ಸರ್ವೋಚ್ಚ ನ್ಯಾಯಾಲಯದ ಈ ಮುಂದಿನ ಐದು ನಿರ್ಣಯಗಳನ್ನು ಪಟ್ಟಿ ಮಾಡಿದೆ:

1) ಟಿ. ಆರ್. ಕಪೂರ್ -ವಿರುದ್ಧ ಹರಿಯಾಣ ರಾಜ್ಯ

ii) ಪಿ.ಡಿ. ಅಗರ್ವಾಲ್ -ವಿರುದ್ಧ-ಉತ್ತರ ಪ್ರದೇಶ ರಾಜ್ಯ (1997) 7 ಎಸ್ಸಿ 676

iii) ಕೆ. ನಾರಾಯಣನ್ -ವಿರುದ್ಧ ಕರ್ನಾಟಕ ರಾಜ್ಯ

iv) ಭಾರತ ಒಕ್ಕೂಟ -ವಿರುದ್ಧ ತುಷಾರ್ ರಂಜನ್ ಮೊಹಂತಿ(1994) 4 ಎಸ್ಸಿಸಿ 450

1v) ಚೇರಮನ್, ರೈಲ್ವೆ ಬೋರ್ಡ್ ವಿರುದ್ಧ ಸಿ.ಆರ್. ರಂಗಧಾಮಯ್ಯ (2010) 12 ಎಸ್ಸಿ 538

29. ಸಿ.ಆರ್. ರಂಗಧಾಮಯ್ಯ 19 ಮೊಕದ್ದಮೆಯಲ್ಲಿ, ಸಾಂವಿಧಾನಿಕ ಪೀಠದ ನಿರ್ಣಯದ 24 ನೇ ಕಂಡಿಕೆಯ ಉದ್ಧೃತ ಭಾಗವು ಈ ಮುಂದಿನಂತಿದೆ:

"24. ಈ ಹಲವು ನಿರ್ಣಯಗಳಲ್ಲಿ, ನೌಕರರ ಮುಂಬಡ್ತಿ, ಜೇಷ್ಠತೆ, ಮೂಲ ನೇಮಕಾತಿ, ಮುಂತಾದ ವಿಷಯಗಳಲ್ಲಿ ಪ್ರತಿಕೂಲ ಪರಿಣಾಮವನ್ನು ಹೊಂದುವ ಹಾಗೆ ಪೂರ್ವಾನ್ವಯ ಅನುಷ್ಠಾನ ನೀಡುವ ಪ್ರಶ್ನಿತ ಉಪಬಂಧಗಳನ್ನು ವಿರೋಧಿಸುವಾಗ, " ನಿಹಿತ ಹಕ್ಕುಗಳು " ಅಥವಾ " ದೊರಕಿದ ಹಕ್ಕುಗಳು " ಪದಾವಳಿಗಳನ್ನು ಬಳಸಲಾಗಿದೆ.ಸದರಿ ಪದಾವಳಿಗಳನ್ನು, ಹಿಂದಿನ ದಿನಾಂಕದಿಂದ ಜಾರಿಯಾಗುವಂತೆ ಬದಲಾಯಿಸಬೇಕೆಂದು ಕೋರಿದ್ದ ಸಂಬಂಧಪಟ್ಟ ನಿಯಮದ ಅಡಿಯಲ್ಲಿ ಬರುವ ಹಕ್ಕಿನ ಸಂದರ್ಭದಲ್ಲಿ ಬಳಸಲಾಗಿದ್ದು, ಆ ಮೂಲಕ ಆ ಸಮಯದಲ್ಲಿ ಜಾರಿಯಲ್ಲಿದ್ದ ನಿಯಮದ ಅಡಿಯಲ್ಲಿ ಲಭ್ಯವಿದ್ದ ಪ್ರಯೋಜನಗಳನ್ನು ಕಸಿದುಕೊಳ್ಳಲಾಗಿದೆ.ಅಸ್ತಿತ್ವದಲ್ಲಿರುವ ನಿಯಮದ ಅಡಿಯಲ್ಲಿ ನೌಕರನಿಗೆ ಈಗಾಗಲೇ ಲಭ್ಯವಿರುವ ಪ್ರಯೋಜನವನ್ನು ಕಸಿದುಕೊಳ್ಳುವ ಪರಿಣಾಮ ಹೊಂದಿರುವ ಪೂರ್ವಾನ್ವಯ ಅನುಷ್ಠಾನ ಹೊಂದಿರುವ ಅಂಥ ತಿದ್ದುಪಡಿಯು ನಿರಂಕುಶ, ತಾರತಮ್ಯಕರ ಹಾಗೂ ಸಂವಿಧಾನದ 14 ನೇ ಮತ್ತು 16 ನೇ ಅನುಚ್ಛೇದಗಳ ಅಡಿಯಲ್ಲಿ ಖಾತ್ರಿ ಪಡಿಸಿದ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಅಭಿಪ್ರಾಯಪಡಲಾಗಿದೆ. "

30. ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಉಲ್ಲೇಖಿಸಿದ ಯೋಗೇಂದ್ರ ಶ್ರೀವಾಸ್ತವ " ಮೊಕದ್ದಮೆಯಲ್ಲೂ ಸಹ, 309 ನೇ ಅನುಚ್ಛೇದದ ಅಡಿಯಲ್ಲಿ ರಚಿಸಿದ ನಿಯಮಗಳನ್ನು, ಪೂರ್ವಾನ್ವಯ ಪರಿಣಾಮದೊಂದಿಗೆ ಅನುಷ್ಠಾನಗೊಳಿಸುವ ಹಾಗೆ ಮಾಡಬಹುದು ಎಂಬುದು ಸತ್ಯ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಅಭಿಪ್ರಾಯಪಡಲಾಗಿದೆ.ಆದರೆ, ಅಸ್ತಿತ್ವದಲ್ಲಿರುವ ನಿಯಮಗಳ ಅಡಿಯಲ್ಲಿ ಈಗಾಗಲೇ ಗಳಿಸಿದ ಅಥವಾ ಆರ್ಜಿಸಿದ ಹಕ್ಕುಗಳನ್ನು ಅಥವಾ ಪ್ರಯೋಜನಗಳನ್ನು ಪೂರ್ವಾನ್ವಯ ಪರಿಣಾಮದೊಂದಿಗೆ ನಿಯಮಗಳನ್ನು ತಿದ್ದುಪಡಿ ಮಾಡುವ ಮೂಲಕ ಕಸಿದುಕೊಳ್ಳಲಾಗುವುದಿಲ್ಲ ಎಂಬುದು ಇತ್ಯರ್ಥಗೊಂಡಿದೆ.

31. ಮೇಲೆ ಹೇಳಿದ ನಿರ್ಣಯಗಳನ್ನು ಗಮನದಲ್ಲಿರಿಸಿಕೊಂಡು ಮತ್ತು ಕೆ. ನಾರಾಯಣನ್ ಮತ್ತು ಪಿ. ಸುಧಾಕರ್ ರಾವ್ ಮತ್ತು ಇತರರು -ವಿರುದ್ಧ ಯು. ಗೋವಿಂದ ರಾವ್ ಮತ್ತು ಇತರರು ಮೊಕದ್ದಮೆಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ಣಯಗಳ ಹಿನ್ನೆಲೆಯಲ್ಲಿ, ' ವರ್ಗಾವಣೆ ಮೂಲಕ ನೇಮಕಾತಿ ' ಉಪಬಂಧಗಳ ಅಡಿಯಲ್ಲಿ ದೊರಕುವ ಪ್ರಯೋಜನಗಳನ್ನು, ಸಹಾಯಕ ಇಂಜಿನಿಯರ್‌ಗಳಾಗಿ ನೇಮಕವಾಗುವ ಮೊದಲು ಕಿರಿಯ ಇಂಜಿನಿಯರ್‌ಗಳು, ಸಹಾಯಕ ಕಾರನಿರ್ವಾಹಕ ಇಂಜಿನಿಯರ್‌ಗಳ ಹುದ್ದೆಗೆ ಮುಂಬಡ್ತಿಗಾಗಿ ಪರಿಗಣಿಸುವ ಉದ್ದೇಶಕ್ಕಾಗಿ ಸಹಾಯಕ ಇಂಜಿನಿಯರ್ ಹುದ್ದೆಯಲ್ಲಿ ಅವರು ಇದ್ದರು ಎಂಬಂತೆ ಅವರು ಸಲ್ಲಿಸಿದ ಸೇವೆಯನ್ನು ಮೂರನೇ ಒಂದರಷ್ಟಕ್ಕೆ ಸೀಮಿತಗೊಳಿಸಲಾಗಿದ್ದು, ಸದರಿ ಪ್ರಯೋಜನವು ಪ್ರತ್ಯರ್ಜಿದಾರರಲ್ಲಿ ನಿಹಿತವಾಗಿತ್ತು.ಅಂಥ ನಿಹಿತ ಹಕ್ಕನ್ನು,ದಿನಾಂಕ: 03.06.2015 ರ ಮಂಡಳಿಯ ಆದೇಶದ ರೂಪದಲ್ಲಿ, ' ವರ್ಗಾವಣೆ ಮೂಲಕ ನೇಮಕಾತಿ ' ಉಪಬಂಧಗಳನ್ನು ಹಿಂತೆಗೆದುಕೊಳ್ಳುವ ಮೂಲಕ ಕಸಿದುಕೊಳ್ಳಲಾಗುವುದಿಲ್ಲ.ತತ್ಪರಿಣಾಮವಾಗಿ, ' ವರ್ಗಾವಣೆ ಮೂಲಕ ನೇಮಕಾತಿ 9 ಉಪಬಂಧಗಳನ್ನು ಹಿಂಪಡೆಯುವುದನ್ನು, ಪ್ರತ್ಯರ್ಜಿದಾರರ (ಪ್ರತ್ಯರ್ಜಿದಾರ-ನಿಗಮದ ಸೇವೆಯಲ್ಲಿ, ' ವರ್ಗಾವಣೆ ಮೂಲಕ ನೇಮಕಾತಿ ' ಉಪಬಂಧಗಳ ಅಡಿಯಲ್ಲಿ ಸಹಾಯಕ ಇಂಜಿನಿಯರ್‌ಗಳಾಗಿ ವರ್ಗಾವಣೆ ಮೂಲಕ ತರುವಾಯದಲ್ಲಿ ನೇಮಕವಾದ ಕಿರಿಯ ಇಂಜಿನಿಯರ್‌ಗಳು/ಡಿಪ್ಲೊಮಾ ಪಡೆದವರು) ಸಂಬಂಧದಲ್ಲಿ,

ಮುಂಬಡ್ತಿಯ ಉದ್ದೇಶಕ್ಕಾಗಿ ಸೇವಾ ವೇಜ್‌ಅನ್ನು ಲೆಕ್ಕಹಾಕುವ ನಿಹಿತ ಹಕ್ಕನ್ನು ಕಸಿದುಕೊಳ್ಳತಕ್ಕದ್ದಲ್ಲ ಎಂದು ಈ ನ್ಯಾಯಾಲಯವು ಘೋಷಿಸಿದೆ.

32. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು ಈ ಮುಂದಿನ ಆದೇಶವನ್ನು ಹೊರಡಿಸಿದೆ:

ಆದೇಶ

i) 8656 ರಿಟ್ ಅರ್ಜಿಸಂಖ್ಯೆ: 26986/2018 ನ್ನು ಈ ಮೂಲಕ ವಜಾಗೊಳಿಸಲಾಗಿದೆ.

ii) ರಿಟ್ ಅರ್ಜಿಸಂಖ್ಯೆ: 14159/2018, 42670/2019 ಮತ್ತು 1670/2020 ನ್ನು ಭಾಗಶಃ ಪುರಸ್ಕರಿಸಲಾಗಿದೆ.

iii) ಪ್ರತ್ಯರ್ಜಿದಾರ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಹೊರಡಿಸಿದದಿನಾಂಕ: 21.06.2018 ರ ಪ್ರಶ್ನಿತ ಪತ್ರಕ್ಕನುಸಾರವಾಗಿ, ಕೆಇಬಿ ಆರ್ & ಪಿ ವಿನಿಯಮಗಳ ೪ ನೇ ಅಧ್ಯಾಯಕ್ಕೆ ಅನುಬಂಧಿಸಿದ ಟಿಪ್ಪಣಿ ( V) ರ ಅನುಸಾರ ಕಿರಿಯ ಇಂಜಿನಿಯರ್ಗಳಾಗಿ ಅರ್ಜಿದಾರರು ಸಲ್ಲಿಸಿದ ಮೂರನೇ ಒಂದರಷ್ಟು ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಮೂಲಕ ಅವರಿಗೆ ನೀಡಿದಂಥ ಅರ್ಹತೆಯ ದಿನಾಂಕದ ಆಧಾರದ ಮೇಲೆ ಸಹಾಯಕ ಕಾರನಿರ್ವಾಹಕ ಇಂಜಿನಿಯರ್ಗಳಾಗಿ ಮುಂಬಡ್ತಿಗಾಗಿ ರಿಟ್ ಅರ್ಜಿಸಂಖ್ಯೆ: 14159/2018, 42670/2019 ಮತ್ತು 1670/2020 ಗಳಲ್ಲಿ ಅರ್ಜಿದಾರರ ಕ್ಲೇಮನ್ನು ಪರಿಗಣಿಸಲು ಪ್ರತ್ಯರ್ಜಿದಾರ-ನಿಗಮಕ್ಕೆ ಈ ಮೂಲಕ ನಿರ್ದೇಶಿಸಲಾಗಿದೆ.

ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶವಿಲ್ಲ.

ಮುಖ್ಯ ಅರ್ಜಿಗಳ ವಿಲೆಯ ದೃಷ್ಟಿಯಿಂದ, ಐ.ಎ.ಸಂಖ್ಯೆ: 1/2020 ಪರಿಗಣನೆಗೆ ಉಳಿದಿರುವುದಿಲ್ಲ ಮತ್ತು ತದನುಸಾರವಾಗಿ ಅದು ವಿಲೆಗೊಂಡಿದೆ.